# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ, ೦೮ ಆಗಸ್ಟ್, ೨೦೨೫ (ಶ್ರಾವಣ ೧೭, ಶಕವರ್ಷ ೧೯೪೭)<br>BENGALURU, FRIDAY, 08 AUGUST, 2025 (SHRAVANA 17, SHAKAVARSHA 1947) | ನಂ. ೪೪೦<br>No. 440 |
|---|---|---|

**<u>ಕರ್ನಾಟಕಸರ್ಕಾರ</u>**

ಸಂಖ್ಯೆ: ಹೆಚ್‌ಡಿ 159 ಪಿಸಿಇ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ, ಡಾ. ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:06.08.2025

## <u>ಅಧಿಸೂಚನೆ</u>

ಬೆಳಗಾವಿಯ ಸುರ್ವಣ ಸೌಧದಲ್ಲಿ ದಿನಾಂಕ: 09.12.2024 ರಿಂದ 20.12.2024 ರವರೆಗೆ ನಡೆದ ಚಳಿಗಾಲದ ಅಧಿವೇಶನ ಸಮಯದಲ್ಲಿ, ದಿನಾಂಕ: 10.12.2024 ರಂದು ಪೊಲೀಸ್ ಆಯುಕ್ತರು, ಬೆಳಗಾವಿ ನಗರ ಇವರು ಅಧಿವೇಶನ ನಡೆಯುತ್ತಿರುವಾಗ, ನಿಷೇಧಾಜ್ಞೆ ಹಾಗೂ ಹೆಚ್ಚಿನ ಪೊಲೀಸ್ ಬಂದೋಬಸ್ತ್‌ನ ನಡುವೆಯು ಪ್ರತಿಭಟನಾಕಾರರು ಸುವರ್ಣ ವಿಧಾನ ಸೌಧದ ಆವರಣದೊಳಗೆ ಆಗಮಿಸಿದ್ದರೆ, ಗಂಭೀರ ಸ್ವರೂಪದ ಅನಾಹುತಗಳಾಗುವದನ್ನು ತಡೆಗಟ್ಟಲು ಪ್ರತಿಭಟನಾಕಾರರನ್ನು ಕನಿಷ್ಠ ಬಲವನ್ನು ಬಳಿಸಿ, ಸುವರ್ಣ ವಿಧಾನ ಸೌಧದೊಳಗೆ ಪ್ರವೇಶಿಸದಂತೆ ಪೊಲೀಸರು ತಡೆದಿರುತ್ತಾರೆ. ಈ ಸಂಬಂಧ, ಶ್ರೀ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿಯವರು ಮತ್ತು ಇತರರ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ:107792/2024 (ಜಿ.ಎಂ./ಆರ್‌ಇಎಸ್) ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:04.04.2025 ರಂದು ಕೆಳಕಂಡಂತೆ ಆದೇಶಿಸಿರುತ್ತದೆ:-

(i) Writ Petition is allowed

(ii) Mandamus issues to the respondents/State to consitute a Commision of Inquiry in terms of the Commission of Inquiry Act, 19582 on the subject matter and the appointed Commission of Inquiry should be single member or a multi member headed by a retire judge of this Court.

(iii) The Commission of Inquiry so appointed shall submit its report within theree months of such appointment.

(iv) The other reliefs sought would remain subject to the report of the Inquiry.

(v) The State shall place its decision on the Inquiry report before this Court in due sourse.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ: 107792/2024ರ ಸಂಬಂಧ, ದಿನಾಂಕ:04.04.2025 ರಂದು ನೀಡಿದ ತೀರ್ಪಿನ ವಿರುದ್ಧ ಸರ್ಕಾರವು ಧಾರವಾಡ ವಿಭಾಗೀಯ ಪೀಠದಲ್ಲಿ ಸಲ್ಲಿಸಿರುವ ರಿಟ್ ಅಪೀಲು ಸಂಖ್ಯೆ:100265/2025ರ ಬಾಬ್ತು ದಿನಾಂಕ:10.07.2025ರಂದು ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ:-

> **Accordingly, the writ appeal stands disposed of directing the appellant/State and its authorities to conduct an enquiry into the incident that took place on 10.12.2024 at Belagavi city through a retired District Judge and submit a report within a within a period of six weeks from today. The impugned order passed by the learned Single Judge is accordingly modified.**
>
> **The appeal is accordingly disposed of.**

ಮೇಲ್ಕಂಡಂತೆ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ವಿಭಾಗೀಯ ಪೀಠವು ನೀಡಿರುವ ನಿರ್ದೇಶನದಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ನಡೆಸಿ, ಆರು ವಾರಗಳ ಒಳಗೆ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು ಬೆಳಗಾವಿಯ ಸುವರ್ಣ ಸೌಧದಲ್ಲಿ ದಿನಾಂಕ: 09.12.2024 ರಿಂದ 20.12.2024 ರವರೆಗೆ ನಡೆದ ಚಳಿಗಾಲದ ಅಧಿವೇಶನ ಸಮಯದಲ್ಲಿ, ದಿನಾಂಕ: 10.12.2024 ರಂದು ನಡೆದ ಗಲಭೆಯ ತನಿಖೆಗಾಗಿ ಶ್ರೀ ಬನ್ನಿಕಟ್ಟಿ ಹನುಮಂತಪ್ಪ ಆರ್. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಿದೆ. ಇವರು ಆರು ವಾರಗಳೊಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸತಕ್ಕದ್ದೆಂದು ಸರ್ಕಾರವು ಅಪೇಕ್ಷಿಸುತ್ತದೆ.

ಸದರಿ ತನಿಖೆಗೆ ಅಗತ್ಯವಿರುವ ವೇತನ, ಸಿಬ್ಬಂದಿ, ಸಾಮಗ್ರಿಗಳು, ವಾಹನ ವ್ಯವಸ್ಥೆ ಹಾಗೂ ಕಛೇರಿ ಮತ್ತು ಪೀಠೋಪಕರಣಗಳು / ದೂರವಾಣಿ ಇತ್ಯಾದಿ ಅಗತ್ಯ ಸಲಕರಣೆಗಳನ್ನು ಪೊಲೀಸ್ ಆಯುಕ್ತರು, ಬೆಳಗಾವಿ ನಗರ, ಬೆಳಗಾವಿ ಇವರು ಒದಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಾಗರಾಜು ಎಸ್.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾನೂನು & ಸುವ್ಯವಸ್ಥೆ)
☎080–2203 3254, **email**: uslo-home@karnataka.gov.in

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH